


ಪಂಚಮುಖಿಯಲ್ಲಿರುವ ಹಾಸಿಗೆ, ದಿಂಬು ಹೊದಿಕೆ ಆಕೃತಿಯ ಕಲ್ಲಿನ ಬಂಡೆಗಳು



ಪಂಚಮುಖಿಯಲ್ಲಿರುವ ವಿಮಾನದ ಮಾದರಿಯ ಚಿತ್ರ



ಪಂಚಮುಖಿ ಆಂಜನೇಯ



ಮಂತ್ರಾಲಯದ ತುಂಗಭದ್ರಾ ನದಿಯಲ್ಲಿ ಪವಿತ್ರ ಸ್ನಾನ ಮಾಡುತ್ತಿರುವ ಭಕ್ತರು

ನಾಗದೇವರು ಇರುವುದನ್ನು ನೋಡಬಹುದು. ಅಲ್ಲದೆ ರಾಯರು ಮಲಗುತ್ತಿದ್ದ ಸ್ಥಳವನ್ನು ಗುರುತಿಸಿಡಲಾಗಿದೆ. ಅಪ್ಪಣ್ಣಚಾರ್ಯರು ರಾಘವೇಂದ್ರ ಸ್ವಾಮಿಗಳಿಗೆ ಚಟ್ನಿ ಮಾಡಲು ಬಳಸುತ್ತಿದ್ದ ವರಳು ಕಲ್ಲು ಸಂಗ್ರಹಿಸಿ ಇಡಲಾಗಿದೆ. ಬಿಚ್ಚಾಲಿಯಲ್ಲಿಯೂ ವೃಂದಾವನ ನಿರ್ಮಿಸಲಾಗಿದೆ.

## ಅಭಯ ಆಂಜನೇಯ ದೇವಸ್ಥಾನ

ಮಂತ್ರಾಲಯದ ಸಮೀಪದಲ್ಲಿರುವ ಅಭಯ ಆಂಜನೇಯನ ದೇವಸ್ಥಾನದ ಹೆಸರಿನಲ್ಲಿಯೇ ಇರುವಂತೆ ಈ ಆಂಜನೇಯನ ದರ್ಶನ ಪಡೆದರೆ ಭಯ ಎನ್ನುವುದೇ ಇರುವುದಿಲ್ಲ ಎನ್ನುವ ನಂಬಿಕೆ ಭಕ್ತರದ್ದು. ರಾಯಚೂರು–ಮಂತ್ರಾಲಯದ ಮಾರ್ಗದ ಬದಿಯಲ್ಲಿ ನಿರ್ಮಿಸಲಾಗಿರುವ ಈ ದೇವಸ್ಥಾನದಲ್ಲಿ ಆಂಜನೇಯನ ಪ್ರಧಾನ ಮೂರ್ತಿ ನಿರ್ಮಿಸಲಾಗಿದೆ. ಕಮಲದ ಆಕಾರದ ಪೀಠದ ಮೇಲೆ ಕುಳಿತಿದ್ದು, 33 ಅಡಿ ಎತ್ತರದಲ್ಲಿ ಏಕಶಿಲೆಯ ಕಲ್ಲಿನ ವಿಗ್ರಹ ಕೆತ್ತಲಾಗಿದೆ. ಬಲಗೈಯಲ್ಲಿ ಅಭಯಹಸ್ತ ಭಂಗಿ, ಎಡಗೈಯಲ್ಲಿ ಗದೆಯೊಂದಿಗೆ ನಿಂತಿರುವ ಮೂರ್ತಿ ಇದು. ಗರ್ಭಗುಡಿಗೆ ಹೋಗುವ ಮೆಟ್ಟಿಲುಗಳ ಎರಡೂ ಬದಿಗಳಲ್ಲಿ ಎರಡು ಆನೆಗಳನ್ನು ಇರಿಸಲಾಗಿದೆ. ಹನುಮ ಜಯಂತಿ ಹಾಗೂ ಶ್ರೀರಾಮನವಮಿಯನ್ನು ಇಲ್ಲಿ ಅದ್ದೂರಿಯಾಗಿ ಆಚರಿಸಲಾಗುತ್ತದೆ.

## ವೆಂಕಟೇಶ್ವರ ದೇವಸ್ಥಾನ

ಮಂತ್ರಾಲಯದ ಮುಖ್ಯ ದೇವಸ್ಥಾನದಿಂದ ಅನತಿ ದೂರದ ಹಳೆ ಪಟ್ಟಣದಲ್ಲಿರುವ ವೆಂಕಟೇಶ್ವರ ಸ್ವಾಮಿ ದೇವಾಲಯದಲ್ಲಿ ರಾಘವೇಂದ್ರ ಸ್ವಾಮಿಗಳು ನಿಯಮಿತ ಪೂಜೆ ಮಾಡುತ್ತ ಮುಖ್ಯ ದೇವರನ್ನು ಸ್ವತಃ ಪ್ರತಿಷ್ಠಾಪಿಸಿದ್ದಾರೆ. ರುದ್ರದೇವರ ಗುಡಿ ಇದೆ. ರಾಘವೇಂದ್ರ ಸ್ವಾಮಿಗಳು ವಾಸಿಸುತ್ತಿದ್ದ ಮನೆ ಇನ್ನೂ ಈ ಪ್ರದೇಶದಲ್ಲಿದೆ. ಪ್ರಧಾನ ದೇವರು ಉತ್ತರಾಭಿಮುಖವಾಗಿ ಕಾಣುತ್ತಾರೆ. ಪ್ರವೇಶದ್ವಾರದಲ್ಲಿ ಎರಡು ದ್ವಾರಪಾಲಕರಿದ್ದು, ಗೋಪುರವನ್ನು ಸುಂದರವಾಗಿ ಅಲಂಕರಿಸಲಾಗಿದೆ.

ಇವು ಕೆಲವು ಉದಾಹರಣೆಗಳಷ್ಟೇ. ಇದೇ ರೀತಿಯಲ್ಲಿ ರಾಯಚೂರು ಸಮೀಪದಲ್ಲಿ ಕಲ್ಲೂರು ಮಹಾಲಕ್ಷ್ಮಿ, ಮಾನವಿಯಲ್ಲಿ ಜಗನ್ನಾಥದಾಸರ ಸನ್ನಿಧಿ, ವಿಜಯದಾಸರ ಜನ್ಮಸ್ಥಳವಾದ ಚೀಕಲಪರ್ವಿ, ಯಾದವೇಂದ್ರ ತೀರ್ಥರ ವೃಂದಾವನವಾಗಿರುವ ಮೂಡುಮಾಲೆ, ಪ್ರಾಣದೇವರ ಸನ್ನಿಧಿಯ ಚಿಂತ್ರವೇಲಿ, ಉರುಕುಂದಿ, ಕವತಾಳಮ್, ಗೋಪಾಲದಾಸರ ಜನ್ಮಸ್ಥಳ ಉತ್ತನೂರು, ಅಲ್ಲಮಪುರ, ಕೊಂಡಾಪುರ, ರಘುಪ್ರೇಮ ತೀರ್ಥರ ಆದೋನಿ, ಭುವನೇಂದ್ರ ತೀರ್ಥರ ಸನ್ನಿಧಿಯ ರಾಜೋಳ್ಳಿ, ಇಭರಾಮಪುರದ ಅಪ್ಪಾವರ ಕಟ್ಟೆ ಹೀಗೆ ಅನೇಕ ಧಾರ್ಮಿಕ ಸ್ಥಳಗಳಿವೆ. ಮಂತ್ರಾಲಯದ ರಾಯರ ಮಠವು ಹೊರ ದೇಶಗಳ ಜೊತೆಗೆ ದೇಶದಲ್ಲಿ ತಿರುಪತಿ, ತಿರುಮಲ, ಮೆಹಬೂಬ ನಗರ, ಹೈದರಾಬಾದ್, ವಾರಂಗಲ್ ಜಿಲ್ಲೆಯ ಹನುಮನಕೊಂಡ, ಗೋವಾ, ಸೊಲ್ಲಾಪುರ, ಮುಂಬೈ, ನವದೆಹಲಿ, ಬದರಿನಾಥ, ಗಂಗಾವತಿ ತಾಲ್ಲೂಕಿನ ಆನೆಗೊಂದಿ ಸೇರಿದಂತೆ ದೇಶದ ಬಹಳಷ್ಟು ಕಡೆ ರಾಯರ ಸನ್ನಿಧಿಗಳು ಇವೆ.

ದೇಹದಲ್ಲಿ ಶಕ್ತಿ ಹಾಗೂ ಆರ್ಥಿಕ ಅನುಕೂಲ ಇರುವವರು ರಾಯರ ದರ್ಶನ ಪಡೆಯಲು ಮೂಲ ಸ್ಥಳಕ್ಕೆ ಹೋಗಬಹುದು. ಇಲ್ಲವಾದರೆ ಭಕ್ತಿಯಿಂದ ಪೂಜಿಸಿ ನೆನೆದರೆ ಪ್ರತಿ ಮನೆ ಹಾಗೂ ಮನವೂ ಮಂತ್ರಾಲಯವಾಗುತ್ತದೆ. ■